# ಸರಳ ಮದುವೆಯ ಆಂದೋಲನ

ಅದ್ದೂರಿ ಮದುವೆಗಳಿಗೆ ಕಡಿವಾಣ ಹಾಕುವ ಸರ್ಕಾರದ ಯೋಚನೆ ಕೇವಲ ಬಡಾಯಿಯಾಗಿ ಉಳಿಯದೆ ಕಾರ್ಯರೂಪಕ್ಕೆ ಬರಬೇಕಿದೆ. ಅಂತೆಯೇ, ತಮ್ಮ ಮದುವೆಯನ್ನು ಸರಳವಾಗಿ ಮಾಡಿಕೊಳ್ಳುವ ಮಾದರಿಯನ್ನು ಯುವಜನತೆ ಅನುಸರಿಸಬೇಕಿದೆ. ಮದುವೆಯ ಹೆಸರಿನಲ್ಲಿ ನಡೆಯುವ ವೈಭವ ನಮ್ಮಲ್ಲಿ ಹುಟ್ಟಿಸಬೇಕಿರುವುದು ಪಾಪಪ್ರಜ್ಞೆಯನ್ನೇ ಹೊರತು ಸಂತೃಪ್ತಿಯನ್ನಲ್ಲ.

ಮಕ್ಕಳ, ಅದರಲ್ಲೂ ಹೆಣ್ಣುಮಕ್ಕಳ ಮದುವೆ ಎನ್ನುವುದು ಬಹುತೇಕ ಪೋಷಕರ ಪಾಲಿಗೆ ದುಃಸ್ವಪ್ನ ಇದ್ದಂತೆ. ಮಕ್ಕಳ ಮದುವೆ ಮಾಡಲಿಕ್ಕಾಗಿ ಆಸ್ತಿ ಮಾರಿಕೊಂಡು ಬರಿಗೈಯಾಗುವ ಪೋಷಕರು ನಮ್ಮ ನಡುವೆ ಸಾಕಷ್ಟು ಮಂದಿ ಇದ್ದಾರೆ. ಇಳಿ ವಯಸ್ಸಿನಲ್ಲಿ ಸಾಲದ ಹೊರೆ ಹೊತ್ತುಕೊಂಡು ಪರಿತಪಿಸುವ ಹಿರಿಯರೂ ಇದ್ದಾರೆ. ಬಹುತೇಕ ಸಂದರ್ಭಗಳಲ್ಲಿ ಎರಡು ದಿನಗಳ ಅದ್ದೂರಿತನದ ಆಚರಣೆಯ ಫಲಿತಾಂಶ ಕುಟುಂಬಗಳ ನೆಮ್ಮದಿಯನ್ನೇ ನಾಶಗೊಳಿಸುವಷ್ಟು ಘೋರವಾಗಿರುತ್ತದೆ. ಮಕ್ಕಳ ಮದುವೆ ಎನ್ನುವುದು ಹೆತ್ತವರ ಪಾಲಿಗೆ ಸಂತೋಷ ತರಬೇಕು. ಬದಲಿಗೆ, ಈ ಮದುವೆ ಕೌಟುಂಬಿಕ ವಾತಾವರಣದಲ್ಲಿ ತಲ್ಲಣಗಳನ್ನು ಉಂಟು ಮಾಡುತ್ತಿರುವುದು ವಿವಾಹದ ಆಚರಣೆಗಳ ಕುರಿತ ನಮ್ಮ ಮನೋಧರ್ಮದ ಪುನರ್ ವಿಶ್ಲೇಷಣೆಗೆ ಕಾರಣವಾಗಬೇಕು.

ಪಟ್ಟಣ ಹಾಗೂ ನಗರ ಪ್ರದೇಶಗಳ ಕಲ್ಯಾಣ ಮಂಟಪಗಳಿಗೆ ಹೋಗಿ ನೋಡಿದರೆ ಅಲ್ಲಿ ಹಣ ಹಾಗೂ ಅಧಿಕಾರದ ಪ್ರದರ್ಶನದ ಪೈಪೋಟಿ ನಡೆಯುತ್ತಿರುತ್ತದೆ. ಮಕ್ಕಳ ಮದುವೆಯ ಹೆಸರಿನಲ್ಲಿ ಕುಟುಂಬದ ಪ್ರತಿಷ್ಠೆಯನ್ನು ಮೆರೆಸುವ ಪ್ರಯತ್ನಗಳು ಕಾಣಿಸುತ್ತವೆ. ಸಾಮಾಜಿಕ ತರತಮಗಳನ್ನು ಮೆರೆಸುವಂತಿರುವ ಮದುವೆಗಳಲ್ಲಿನ ಆರತಕ್ಷತೆ, ಮದುವೆ ಮನೆ ಸಿಂಗಾರ, ಒಡವೆ, ಬಟ್ಟೆಬರೆ, ಊಟದ ಎಲೆಗಳಲ್ಲಿನ ಬೊಜ್ಜು– ಎಲ್ಲವೂ ಕಣ್ಣಿಗೆ ರಾಚುವಂತಿರುತ್ತದೆ. ಮದುವೆ ಮಂಟಪಗಳ ಕೂಗಳತೆ ದೂರದಲ್ಲೇ ಹಸಿದ ಮಕ್ಕಳ ಜೋಲು ಮೋರೆಗಳು ಕಾಣಿಸಿದರೆ, ಕಲ್ಯಾಣಮಂಟಪಗಳಿಂದ ರಾಶಿರಾಶಿ ಆಹಾರ ಪದಾರ್ಥಗಳು ಎಂಜಲಿನ ತ್ಯಾಜ್ಯದ ರೂಪದಲ್ಲಿ ತಿಪ್ಪೆ ಸೇರುತ್ತಿರುತ್ತದೆ. ನೂರಕ್ಕೆ ಮೂವತ್ತಕ್ಕೂ ಹೆಚ್ಚು ಜನ ಬಡತನದ ರೇಖೆಯಡಿ ಬದುಕುತ್ತಿರುವ ದೇಶದಲ್ಲಿ ನಡೆಯುವ ಈ ದುಂದು ಬಡತನದ ಅಣಕವಲ್ಲದೆ ಬೇರೇನೂ ಅಲ್ಲ. ಇಂಥ ಅನೈತಿಕ ಮದುವೆಗಳನ್ನು ಮಧ್ಯಮ ವರ್ಗದ ಜನರೂ ಅನುಕರಿಸಲು ಹೋಗಿ ಸಾಲಗಾರರಾಗುತ್ತಾರೆ. ಬಡವರು ಕೂಡ ತಮ್ಮ ಶಕ್ತ್ಯಾನುಸಾರ ಸಾಲ ಮಾಡಲು ಹಿಂಜರಿಯುವುದಿಲ್ಲ. ಪೋಷಕರ ಜೊತೆಗೆ ಮದುಮಕ್ಕಳು ಕೂಡ ಈ ಸಾಲದ ಕಾವಿಗೆ ಸಿಲುಕಿ, ಅವರ ದಾಂಪತ್ಯದ ರಸಕ್ಷಣಗಳು ನಲುಗಿಹೋಗುತ್ತವೆ. ಇದನ್ನೆಲ್ಲ ನೋಡಿದರೆ, ನಾವು ನಂಬಿಕೊಂಡು ಬಂದಿರುವ 'ಮದುವೆ'ಯ ಪರಿಕಲ್ಪನೆಯಲ್ಲೇ ದೋಷ ಇರುವಂತಿದೆ.

ಮದುವೆ ಎನ್ನುವುದು ಎರಡು ಯುವ ಮನಸ್ಸುಗಳು ಒಟ್ಟಾಗಿ ಬದುಕಲಿಕ್ಕೆ ಸಾಮಾಜಿಕ ಸಮ್ಮತಿಯನ್ನು ದೊರಕಿಸಿಕೊಡುವ ಒಂದು ಆಚರಣೆಯಷ್ಟೇ. ಇದು ಅತ್ಯಂತ ಸರಳವಾಗಿ ಹಾಗೂ ಸಹಜವಾಗಿ ಇದ್ದಾಗಲಷ್ಟೇ ಅರ್ಥಪೂರ್ಣವಾಗಿರುತ್ತದೆ. ಇಲ್ಲದೆ ಹೋದಲ್ಲಿ ಅದೊಂದು ಪ್ರಹಸನದ ರೂಪ ಪಡೆದುಕೊಳ್ಳುತ್ತದೆ. ವಿವಾಹದ ಆಚರಣೆಗಳಲ್ಲಿನ ಭಾವುಕತೆ – ಆತ್ಮೀಯತೆ ಕ್ಷೀಣಿಸುತ್ತ, ಇಡೀ ಆಚರಣೆಯೇ ಒಂದು ವ್ಯಾಪಾರವಾಗಿ ಬದಲಾಗಿದೆ. ಮದುವೆಯ ಕಾರಣದಿಂದಾಗಿ ಸಮಾಜದಲ್ಲಿನ ಅಡ್ಡಗೋಡೆಗಳು ನಿವಾರಣೆ ಆಗಬೇಕು. ಪ್ರೇಮದಿಂದ ಜಾತಿಯನ್ನು ಮೀರಲು ಸಾಧ್ಯವಾಗಬೇಕು. ಸಾಮರಸ್ಯಕ್ಕೆ ಕಾರಣ ಆಗಬೇಕಾದ ವಿವಾಹಸಂಬಂಧಗಳು ಅಬ್ಬರಕ್ಕೆ, ಜಾತಿಯನ್ನು ಪೋಷಿಸಲಿಕ್ಕೆ ಹಾಗೂ ಅಹಂಕಾರದ ಪ್ರದರ್ಶನಕ್ಕೆ ಬಳಕೆಯಾಗುತ್ತಿರುವುದು ಭಾರತೀಯ ಸಂಸ್ಕೃತಿ ಪೋಷಿಸಿಕೊಂಡು ಬಂದಿರುವ 'ಸಮಬಾಳು ಸಮಪಾಲು' ನಂಬಿಕೆಗೆ ವಿರುದ್ಧವಾದುದು.

ಇಂಥ ಮದುವೆಗಳನ್ನು ನಿರ್ಬಂಧಿಸುವುದು ಕಷ್ಟ. ಹಣ ಹಾಗೂ ಅಧಿಕಾರಗಳ ಅಹಂಕಾರದ ರೂಪಗಳಲ್ಲಿ ನಡೆಯುವ ಮದುವೆಗಳನ್ನು ಸಹಿಸಿಕೊಳ್ಳುವುದೂ ಕಷ್ಟ. ಆದರೆ, ಇಂಥ ಮದುವೆಗಳ ಮೇಲೆ ತೆರಿಗೆಯನ್ನು ಹೇರುವ ಮೂಲಕ ಸರ್ಕಾರ ಅದ್ದೂರಿ ಮದುವೆಗಳ ಕುರಿತಂತೆ ತನ್ನ ನೈತಿಕ ವಿರೋಧವನ್ನು ತೋರಬಹುದು. ಈ ತೆರಿಗೆ ಮೂಲಕ ಸಂಗ್ರಹವಾಗುವ ಹಣವನ್ನು ಸಾಮಾಜಿಕ ಚಟುವಟಿಕೆಗಳಿಗೆ ಬಳಸಬಹುದಾಗಿದೆ. ಸಿದ್ದರಾಮಯ್ಯನವರ ಸರ್ಕಾರ ಅಧಿಕಾರಕ್ಕೆ ಬಂದ ಹೊಸತರಲ್ಲಿ ಮದುವೆಗಳ ಅದ್ದೂರಿತನಕ್ಕೆ ಅಂಕುಶ ಹಾಕುವ ಬಗ್ಗೆ ಮಾತನಾಡಿತ್ತು. ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸುವ ಮದುವೆಗಳಿಗೆ ತೆರಿಗೆ ವಿಧಿಸಲು ಚಿಂತನೆ ನಡೆಸಿತ್ತು. ಈ ಹಣ ಸರಳ ಮದುವೆಗಳಿಗೆ ಹಾಗೂ ಸಾಮೂಹಿಕ ವಿವಾಹಗಳಿಗೆ ಬಳಕೆಯಾಗಲಿ ಎನ್ನುವ ಸಲಹೆಗಳೂ ಬಂದಿದ್ದವು. ಆದರೆ, 2015–16ರ ಸಾಲಿನ ರಾಜ್ಯ ಬಜೆಟ್‌ನಲ್ಲಿ ಈ ಕುರಿತ ಯಾವ ಪ್ರಸ್ತಾಪವೂ ಇದ್ದಂತಿಲ್ಲ. ಅದ್ದೂರಿ ಮದುವೆಗಳಿಗೆ ಕಡಿವಾಣ ಹಾಕುವ ಸರ್ಕಾರದ ಯೋಚನೆ ಕೇವಲ ಬಡಾಯಿಯಾಗಿ ಉಳಿಯದೆ ಕಾರ್ಯರೂಪಕ್ಕೆ ಬರಬೇಕಿದೆ. ಅಂತೆಯೇ, ತಮ್ಮ ಮದುವೆಯನ್ನು ಸರಳವಾಗಿ ಮಾಡಿಕೊಳ್ಳುವ ಮಾದರಿಯನ್ನು ಯುವಜನತೆ ಅನುಸರಿಸಬೇಕಿದೆ. ಮದುವೆಯ ಹೆಸರಿನಲ್ಲಿ ನಡೆಯುವ ವೈಭವ ನಮ್ಮಲ್ಲಿ ಹುಟ್ಟಿಸಬೇಕಿರುವುದು ಪಾಪಪ್ರಜ್ಞೆಯನ್ನೇ ಹೊರತು ಸಂತೃಪ್ತಿಯನ್ನಲ್ಲ. ಸರಳ ಮದುವೆಯ ಆದರ್ಶ ಒಂದು ಆಂದೋಲನವಾಗಿ ರೂಪುಗೊಳ್ಳುವುದು ಈ ಹೊತ್ತಿನ ತುರ್ತು.

■ **ರಘುನಾಥ ಚ.ಹ.**

